ಪಾಠ 2 ಅಕ್ಟೋಬರ್ 6–12

# ಐಕ್ಯತೆಯ ಒಡಕಿಗೆ ಕಾರಣಗಳು



## ಸಬ್ಬತ್ತು ಮದ್ಯಾಹ್ನ

**ಈ ವಾರದ ಅಭ್ಯಾಸಕ್ಕಾಗಿ: ಧರ್ಮೋ 28:1–14; ಯೆರೆ 3:14–18; ನ್ಯಾಯಸ್ಥಾ 17:6; 1 ಅರಸು 12:1–16; ಕೊರಿಂಥ 1:10–17, ಅ.ಕೃ 20:25–31.**

**ಸ್ಮರಣ ವಾಕ್ಯ: "ಯೆಹೋವನ ಭಯವೇ ಜ್ಞಾನಕ್ಕೆ ಮೂಲವು; ಪರಿಶುದ್ಧನ ತಿಳುವಳಿಕೆಯೇ ವಿವೇಕವು(ಜ್ಞಾನೋಕ್ತಿಗಳು 9:10)**

ಹಳೆ ಒಡಂಬಡಿಕೆಯ ಪ್ರವಾದಿಗಳು ಇಸ್ರಾಯೇಲ್ಯರು ದೇವರ ಉಪದೇಶಕ್ಕೆ ವಿಧೇಯರಾಗಬೇಕೆಂದು ಮೇಲಿಂದ ಮೇಲೆ ತಿಳಿಸಿದರು. ಅವಿಧ್ಯೇಯತೆಯೆಂತೆ ಮತ್ತು ನಿರ್ಲಕ್ಷತೆ ಯಾವಾಗಲೂ ಅಧರ್ಮಕ್ಕೂ ಮತ್ತು ಅನೈಕತೆಗೂ ನಡೆಸುತ್ತದೆ. ಧರ್ಮ ಶಾಸ್ತ್ರಕ್ಕೆ ಅವರು ವಿಧೇಯರಾಗಿ ನಡೆಯುವುದು ಅವರನ್ನು ಪಾಪದಿಂದಾಗುವ ಶಾಪಗಳಿಂದ ತಪ್ಪಿಸುವುದಲ್ಲದೆ ಅಧರ್ಮಕ್ಕೆ ಒಳಗಾಗದ ಹಾಗೆ ಕಾಪಾಡುವದು ಮತ್ತು ಸುತಮತ್ತಲಿನ ರಾಷ್ಟ್ರಗಳ ನಡುವೆ ಪವಿತ್ರರಾಗಿ ಉಳಿಸುವ ಉದ್ದೇಶವಾಗಿತ್ತು. ದೇವರ ಚಿತ್ತದಂತೆ ಅವರು ನಡೆದಾಗ ಅವರಲ್ಲಿ ಸಾಹಾರ್ದತೆ ಸೃಷ್ಟಿಯಾಗಿ ಇಡೀ ಸಮೂಹವಾಗಿ ಅವರು ಸುತ್ತಮುತ್ತಲಿನವರ ಅನ್ಯದೇವತೆಗಳ ಭ್ರಷ್ಟ ಆರಾಧನೆಗಳು ತಮ್ಮೊಳಗೆ ಪ್ರವೇಶಿಸಿದ ಹಾಗೆ ಇಚ್ಛಾಪೂರ್ವಕವಾಗಿ ತಡೆಗಟ್ಟುವ ಬಲ ಅವರಲ್ಲಿ ಉಂಟಾಗುತ್ತಿತ್ತು. ತನ್ನ ಜನರಿಗಾಗಿ ದೇವರ ಉದ್ದೇಶವೇನಾಗಿ–ತ್ತೆಂದರೆ ಅವರು ಪರಿಶುದ್ದರಾಗಿದ್ದು ಅವರ ಸುತ್ತಮುತ್ತಲಿನ ರಾಷ್ಟ್ರಗಳಿಗೆ ದೇವರ

ಸಾಕ್ಷಿಗಳಾಗಿರಬೇಕಾಗಿತ್ತು.

ಇಬ್ರಿಯರನ್ನು ಐಗುಪ್ತದಿಂದ ಹೊರತಂದ ಮೇಲೆ ಸ್ವಾಮಿಯು ಅವರಿಗೆ ಹೇಳಿದ್ದು: ನೀವು ಸ್ವಾಧೀನ ಮಾಡಿ ಕೊಳ್ಳುವದಕ್ಕೆ ಹೋಗುವ ದೇಶದಲ್ಲಿ ಅನುಸರಿಸಬೇಕಾದ ಆಜ್ಞಾವಿಧಿಗಳನ್ನು ನನ್ನ ದೇವರಾದ ಯೆಹೋವನು ನನಗೆ ಆಜ್ಞಾಪಿಸಿದಂತೆಯೇ ನಿಮಗೆ ಬೋಧಿಸಿದ್ಧೇನೆ. ಇವುಗಳನ್ನು ಕೈಕೊಂಡು ಅನಸರಿಸಿರಿ. ಅನುಸರಿಸಿದರೆ ಅನ್ಯಜನಗಳು ನಿಮ್ಮನ್ನು ಜ್ಞಾನಿಗಳೂ ವಿವೇಕಿಗಳೂ ಎಂದು ತಿಳಿಯುವರು, ಅವರು ಈ ಅಜ್ಞೆಗಳ ವಿಷಯದಲ್ಲಿ ವರ್ತಮಾನವನ್ನು ಕೇಳಿ "ಈ ದೊಡ್ಡ ಜನಾಂಗವು ಜ್ಞಾನ ವಿವೇಕವುಳ್ಳ ಜನಾಂಗ ಎಂದು ಮಾತಾಡಿಕೊಳ್ಳುವರು" (ಧರ್ಮೋಪ 4:5,6). ಬೇರಾವ ಪ್ರಶ್ನೆಗಳಿಲ್ಲದೆ, ಅವರು ಪ್ರಾಮಾಣಿಕರಾಗಿ ಉಳಿದಿದ್ದರೆ, ದೇವರ ಜನರು ಶ್ರೇಷ್ಠ ಆಶೀರ್ವಾದಗಳನ್ನು ಪಡೆದವರಾಗಿ ಇತರರಿಗೂ ಆಶೀರ್ವಾದ ನಿಧಿಯಾಗಿರುತ್ತಿದ್ದರು. ಅಪ್ರಾಮಾಣಿಕತೆ, ಹಾಗೂ ಅನೇಕ ಸಮಸ್ಯೆಗಳಿಗೆ ಎಡೆಮಾಡುತ್ತದೆ, ಅನೈಕ್ಯತೆ ಅವುಗಳಲ್ಲಿ ಒಂದು.

ಈ ವಾರದ ಆಭ್ಯಾಸ ಅಕ್ಟೋಬರ್ 13 ಸಬ್ಬತ್ತಿಗಾಗಿ ಸಿದ್ಧತೆ.

**ಭಾನುವಾರ** **ಅಕ್ಟೋಬರ್** 7

### "ಸನ್ಮಾರ್ಗ ತ್ಯಜಿಸಿದ ಮಕ್ಕಳೇ, ಹಿಂದಿರುಗಿರಿ"

ಇಸ್ರಾಯೇಲ್ ಜನರ ಚರಿತ್ರೆಯು ಅವರ ಅವಿಧೇಯತೆ ಅದರಿಂದಾದ ಅರಾಜಕತೆ, ನಂತರ ಅವರು ವಿಧೇಯತೆಯ ಮೂಲಕ ದೇವರೆಡೆಗೆ ತಿರುಗಿದ್ದು ಅದರ ಹಿಂದೆಯೇ ಪುನಃ ದೇವರಿಗೆ ಅವಿಧೇಯರಾಗಿ ಶದನಗಳಿಗೊಳಗಾದದ್ದು ಇಂಥ ಏರಿಳಿತಗಳ ಕತೆಗಳಿಂದ ತುಂಬಿದೆ. ಈ ರೀತಿಯ ಮಾದರಿಯೇ ಮೇಲಿಂದ ಮೇಲೆ ಮರುಕಳಿಸಿದೆ. ಪ್ರತಿಸಾರಿ ಅವರು  ಇಚ್ಛಾಪೂರ್ವಕವಾಗಿ ದೇವರ ಕಡೆಗೆ ತಿರುಗುದಾಗ ಶಾಂತಿ, ಸಮಾದಾನ ಬದುಕುಗಳಿಂದ ಆಶೀರ್ವಧಿಸಲ್ಪಟ್ಟರು. ಯಾವಾಗ ಅವಿಧೆಯರಾಗಿ ತಮ್ಮಿಷ್ಟದ ಹಾಗೆ ನಡೆದರೋ ಆಗ ಅವರಲ್ಲಿ ಅಸಮಧಾನ, ಕದನ, ಜಗಳ, ಯುದ್ಧಗಳುಂಟಾದವು. ಇಸ್ರಾಯೇಲ್ಯರು ವಾಗ್ದಾನದ ದೇಶಕ್ಕೆ ಸೇರುವ ಮೊದಲೇ ದೇವರು ಅವರ ಸ್ವಭಾವ ಹೇಗಿದೆ ಎಂದರಿತು ಅವರು ತೊಂದರೆಗೀಡಾಗಬಾರದು ಎಂದು ಉಪಶಮನವನ್ನು ಮೊದಲೇ ಒದಗಿಸಿದ್ದನು.

ಧರ್ಮೋಪದೇಶ 28:1–14 ಓದಿರಿ: ಇಸ್ರಾಯೇಲ್ಯರು ದೇವರ ಚಿತ್ತದಂತೆ ನಡೆದಿದ್ದರೆ

ಯಾವ ಆಶೀರ್ವಾದಗಳು ಅವರಿಗೆ ಸಿಗುತ್ತಿದ್ದವು?

____________________________________________

____________________________________________

____________________________________________

ಯೆರೆಮೀಯ3:14–18 ಓದಿರಿ. ದೇವರು ಇಸ್ರಾಯೇಲ್ಯರನ್ನು ಪಶ್ಚಾತಾಪಪಟ್ಟು ಮಾನಸಾಂತರದಿಂದ ಆತನೆಡೆಗೆ ತಿರುಗಿರಿ ಎಂದು ಕರೆದದ್ದರ ಮೂಲಕ ನಾವೇನು ಕಲಿಯುತ್ತೇವೆ? ದೇವರು ತನ್ನವರ ಮೇಲಿಟ್ಟ ಪ್ರೀತಿ ಸಹನೆಗಳ ಬಗ್ಗೆ ಅದು ಏನು ಹೇಳುತ್ತದೆ?

____________________________________________

____________________________________________

____________________________________________

ಯೆರೆಮೀಯನ ಗ್ರಂಥದಲ್ಲಿ ವಿಷ್ಮಯಕಾರಿ ವಿಷಯವೇನೆಂದರೆ ಆತನ ಜನರು ಅವಿಧೇಯರು ದಂಗೆ ಎದ್ದವರು, ಭೇದಭಾವಿಗಳು, ಮೂರ್ತಿಪೂಜಕರು ಆಗಿದ್ದಾಗ್ಯೂ, ದೇವರು ಅವರನ್ನು ಪ್ರೀತಿ, ಕರುಣೆ ಮತ್ತು ದಯಾಮಹಿಯಾಗಿಯೇ ಕಂಡದ್ದು ದೇವರು ತನ್ನ ಜನರನ್ನು ಯಾವಾಗಲೂ ತಮ್ಮ ದುರ್ನಡತೆಗಳನ್ನು ಬಿಟ್ಟು, ಮಾನಸಾಂತರಪಟ್ಟು ತನ್ನೆಡೆಗೆ ತಿರುಗಿರೆಂದು ಆಹ್ವಾನಿಸುತ್ತಿದ್ದಾನೆ, ಮೇಲಿಂದ ಮೇಲೆ ದೇವರು ಅವರಿಗೆ ಮುಂದಿನ ವಿಮೋಚನಾ ಮತ್ತು ನಿರೀಕ್ಷೆಯ ವಾಗ್ದಾನಗಳನ್ನು ಮಾಡಿದ್ದಾನೆ.

"ಭ್ರಷ್ಟಾರಾದ ಇಸ್ರಾಯೇಲೇ ಹಿಂದಿರುಗು," ಯೆಹೋವನು ಅನ್ನುತ್ತಾನೆ; "ನಾನು ಕೋಪ ಮುಖದಿಂದ ನಿನ್ನನ್ನು ನೋಡೆನು, ನಾನು ಕರುಣಾಶಾಲಿ", "ನಾನು ನಿತ್ಯಕೋಪಿಯಲ್ಲ, ಇದೊಂದನ್ನು ಮಾಡು ನೀನು ಕಂಡಕಡೆಯೆಲ್ಲ ತಿರುಗುತ್ತಾ ಸೊಂಪಾಗಿ ಬೆಳೆದಿರುವ ಪ್ರತಿಯೊಂದು ಮರದ ಕೆಳಗೆ ಅನ್ಯರನ್ನು ಸೇರಿ ನನ್ನ ಮಾತನ್ನು ಕೇಳದೆ ನಿನ್ನ ದೇವರಾದ ಯೆಹೋವನೆಂಬ ನನಗೆ ದ್ರೋಹ ಮಾಡಿದ್ದೀ ಎಂಬುದಕ್ಕೆ ಒಪ್ಪಿಕೋ, "ಇದೇ ಯೆಹೋವನ ನುಡಿ" (ಯೆರೆಮೀಯ 3:12,13).

ಯೆರೆಮಿಯನು ಮಾತಾಡಿದ್ದ ಕಾಲದಲ್ಲಿ ಸಾಮಾನ್ಯವಾಗಿ ಎಲ್ಲರೂ ದೇವರ ಧರ್ಮಶಾಸ್ತ್ರಗಳನ್ನು ನಿರ್ಲಕ್ಷಿಸಿದ್ದರು. ಯೆರೆಮೀಯನ ಕಾಲದಲ್ಲಿ ಹಲವು ಧರ್ಮ ಸುಧಾರಣಾ ಕಾರ್ಯಗಳು ಪ್ರಾರಂಭವಾಗಿದ್ದರೂ, ಅನೇಕರು ದೇವರ ಆಜ್ಞೆಗಳಿಗೆ ಸಂಪೂರ್ಣ ವಿಧೇಯತೆ ತೋರಲಿಲ್ಲ. ಅವರೆಲ್ಲರೂ ಪಾಪ, ಮೂರ್ತಿ ಪೂಜೆ, ಸ್ವಾರ್ಥತೆಯಿಂದ ತುಂಬಿದ ಬದುಕು, ಎಲ್ಲರ ಆಧ್ಯಾತ್ಮಿಕ ಹಾಗೂ ರಾಜಕಿಯ ಬದುಕಿನ ನಾಶನಕ್ಕೆ ಕಾರಣವಾಗಿದ್ದವು. ಎಷ್ಟು ಹೆಚ್ಚಾಗಿ ದೈವಭಕ್ತಿಯಲ್ಲಿ ಅವರು

ಹಿಂಜರಿದರೋ, ಅಷ್ಟೇ ಹೆಚ್ಚಾಗಿ ಅವರ ಭವಿಷ್ಯ ವಿನಾಶಕರವಾಗಿತ್ತು. ಹೀಗಿದ್ದರೂ ಯೆರೆಮೀಯನ ಮೂಲಕ ದೇವರು ಅವರನ್ನು ಬೇಡಿಕೊಂಡನು. ಅವರಿಗಾಗಿ ದೇವರು ಸುದಿನಗಳನ್ನು ಇಚ್ಛಿಸಿದ್ದು ಮತ್ತು ಅವರು ಸಮೃದ್ಧಿಗೆ ಹಿಂದಿರುಗಬೇಕು, ಐಕ್ಯತೆ ಮತ್ತು ಕ್ಷೇಮದಿಂದಿರಬೇಕು ಎಂದು ಎದುರುನೋಡಿದನು. ಆದರೂ ಇದೆಲ್ಲ ಈಡೇರುವದು ಅವರು ನಂಬಿಗಸ್ಥರಾಗಿ ವಿಶ್ವಾಸವನ್ನು ಕಾಪಾಡಿಕೊಂಡಿದ್ದರೆ ಮಾತ್ರ.

**ನಿಮ್ಮ ವೈಯಕ್ತಿಕ ಜೀವನದಲ್ಲಿ ವಿಧೇಯತೆ ಮತ್ತು ಅವಿಧೇಯತೆ ನಡುವಿನ ಅಂತರ ಯಾವ ಪರಿಣಾಮ ಮಾಡಿದೆ?**

**ಸೋಮವಾರ** **ಅಕ್ಟೋಬರ್ 8**

**ತನ್ನ ಸ್ವಂತ ದೃಷ್ಟಿಯಲ್ಲಿ ಸರಿ**

ನ್ಯಾಯ ಸ್ಥಾಪಕರುಗಳು ಪುಸ್ತಕದಲ್ಲಿ ಅನೇಕ ದೃಷ್ಟಾಂತಗಳು ಹೇಳುವುದು, ಇಸ್ರಾಯೇಲ್ಯರು ದೇವರ ವಾಕ್ಯದಂತೆ ನಡೆಯದೇ ಇದ್ದಾಗ ಬಹಳಷ್ಟು ಬಾಧೆಗಳಿಗೆ ಈಡಾದರು ಇಸ್ರಾಯೇಲ್ಯರು ಕಾನಾನ್ ದೇಶ ಪ್ರವೇಶಿಸಿದ ಕೂಡಲೇ ಅವರ ಸುತ್ತಮುತ್ತ ಜೀವಿಸುತ್ತಿದ್ದ ಕಾನಾನ್ಯರ ಧರ್ಮಆಚರಣೆಗಳನ್ನು ವೀಕ್ಷಿಸಿ ಆ ರೀತಿಯಲ್ಲಿಯೇ ತಮ್ಮ ಬದುಕುಗಳನ್ನು ರೂಪಿಸಿಕೊಳ್ಳ ತೊಡಗಿದರು–ಇದನ್ನೇ ದೇವರು ಮಾಡಬಾರದೆಂದು ತಿಳಿಸಿದರು! ಅವರಿಗೆ ಇದೊಂದೇ ಕೆಡುಕು ಆಗಿರದೇ ಇನ್ನು ಅನೇಕ ಅಂಥ ಸಮಸ್ಯಗಳಿದ್ದವು.

**ನ್ಯಾಯಸ್ಥಾಪಕರುಗಳು 17:6 ಮತ್ತು 21:25 ಓದಿರಿ. ದೇವ ಜನರಲ್ಲಿ ಉದ್ಭವಿಸಿದ ಇತರ ಸಮಸ್ಯೆಗಳ ಬಗ್ಗೆ ಈ ವಾಕ್ಯಗಳು ಹೇಳುವುದೇನು?**

____________________________________________

____________________________________________

ದೇವರ ಜನರಲ್ಲಿ ಭೇದಭಾವ, ಮತ್ತು ಒಡಕುಗಳನ್ನು ತರುವ ಸ್ವಭಾವಗಳ ಬಗ್ಗೆ ಚರ್ಚಿಸಿರಿ ಅವರು ತಮ್ಮೊಡನೆ ಒಡಂಬಡಿಕೆ ಮಾಡಿಕೊಂಡ ದೇವ–ರಿಗೆ ಒಡಂಬಡಿಕೆಗನುಸಾರವಾಗಿ ವಿಧೇಯರಾಗಿ ನಡೆದಾಗ ಅವರಲ್ಲಿ ರಾಷ್ಟ್ರದೈಕ್ಯತೆ ಮೂಡಿಬರುವಂತಿತ್ತು. ತಮಗೆ ಸರಿ ತೊರುವುದನ್ನೇ ಅವರು ಮಾಡುವುದರ ಮೂಲಕ–ಅದರಲ್ಲೂ ತಮ್ಮ ನೆರೆಹೊರೆಯ ರಾಷ್ಟ್ರಗಳನ್ನು ಅನುಕರಿಸಿ ಅವರ ಪ್ರಭಾವದಲ್ಲಿ ಬಿದ್ದಾಗ ಅವರು ನಾಶನದ ಮಾರ್ಗದಲ್ಲಿದ್ದದ್ದು ಖಚಿತ. ನಾವೆಲ್ಲರೂ ಬಿದ್ದು

ಹೋದವರೇ, ನಮ್ಮ ಹಾದಿಗಳಲ್ಲಿಯೇ ನಮ್ಮನ್ನು ಬಿಡುವುದಾದರೆ, ನಮ್ಮ ಮನಸ್ಸಿಗೆ ಸರಿದೋರುವುದನ್ನೇ ಮಾಡುವುದರಲ್ಲಿ ಮೂಂದೆ ವರಿಸಿದರೆ, ಖಂಡಿತವಾಗಿಯೂ ದೇವರು ಹಾಕಿಕೊಟ್ಟ ದಾರಿ ತೊರೆದು ಅತ್ತಿತ್ತ ಅಲೆದಾಡುವವರಾಗುತ್ತೇವೆ.

ನ್ಯಾಯಸ್ಥಾಪಕರುಗಳು ಕಾಲದಲ್ಲಿ ಇಸ್ರಾಯೇಲ್ಯರು ಅದ್ಯಾತ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು ಹೋಗಿದ್ದವು ಎಂಬುದರ ಬಗ್ಗೆ ಕೆಳಗಿನ ವಾಕ್ಯಗಳು ಏನು ಹೇಳುತ್ತವೆ?

ನ್ಯಾಯಸ್ಥಾಪಕರುಗಳು 2:11–13______________________________

ನ್ಯಾಯಸ್ಥಾಪಕರುಗಳು 3:5–7________________________________

"ಮೋಶೆಯ ಮೂಲಕ ದೇವರು ತನ್ನ ಜನರು ಅಪ್ರಾಮಾಣಿಕರಾದರೆ ಅದರ ಪ್ರತಿಫಲ ಏನಾಗುವದೆಂದು ತಿಳಿಸಿದ್ದರು. ಆತನ ಒಡಂಬಡಿಕಗೆ ನಿರಾಕರಿಸಿದರೆ, ದೈವಿಕ ಬದುಕಿನಿಂದ ಬೇರ್ಪಟ್ಟ, ದೇವರ ಆಶೀರ್ವಾದ ಹೊಂದಿದವರು. ದೇವರ ಆಜ್ಞೆಗಳಿಗೆ ವಿಧೆಯರಾಗಿ ನಡೆದಾಗ ಯಹೂದ್ಯರು ಬಹಳ ಆಶೀರ್ವಾದಗಳನ್ನು ಹೊಂದಿದರಲ್ಲದೇ ಇತರರಿಗೂ ಆಶೀರ್ವಾದವಾಗಿದ್ದರು. ಆದರೆ ಇನ್ನು ಹೆಚ್ಚಾಗಿ ಇತಿಹಾಸದ ಪ್ರಕಾರ ಅನೇಕ ಸಾರಿ ಅವರು ದೇವರನ್ನು ಮರೆತು ದೇವರ ಪ್ರತಿನಿಧಿಗಳಾಗಿ ಅನುಭವಿಸಬೇಕಿದ್ದ ಅವಕಾಶಗಳನ್ನು ಕಳೆದುಕೊಂಡರು. ದೇವರಿಗೆ ಸಲ್ಲಬೇಕಾದ ಆರಾಧನೆಯಲ್ಲಿ ಆತನನ್ನು ವಂಚಿಸಿದರು, ಸಹಾಬಾಳ್ವೆಯಿಂದ ಇವರು ಅವರಿಗೆ ಸಲ್ಲಬೇಕಾದ ದೈವಿಕ ತಿಳುವಳಿಕೆ ಮತ್ತು ಪವಿತ್ರ ಮಾದರಿಯಾಗಿರುವದರಲ್ಲಿ ಅವರನ್ನು ವಂಚಿಸಿದರು, ಯಾವ ತೋಟದ ಮೇಲ್ವಿಚಾರಕರಾಗಿರಬೇಕಿತ್ತು ಅಲ್ಲಿಂದ ಸ್ವಾರ್ಥ ನೀಚ ಲಾಭ ಬಯಸಿದರು. ಅವರ ದುರಾಶೆ ಮತ್ತು ದುಷ್ಕೃತ್ಯಗಳಿಂದಾಗಿ ಅನ್ಯರೂ ಅವರನ್ನು ಹೀನೈಸಿದರು. ಹೀಗಾಗಿ ಅನ್ಯ ಜನಾಂಗದವರು ದೇವರಗುಣ ಮತ್ತು ಆತನ ಧರ್ಮಶಾಸ್ತ್ರವನ್ನೂ ತಪ್ಪಾಗಿ ಕಲ್ಪಿಸಿಕೊಳ್ಳಲು ಅವಕಾಶವಾಯಿತು" ಎಲ್ಲೆನ್ ವೈಟ್, ಪ್ರಾಫೆಟ್ಸ್ ಅಂಡ್ ಕಿಂಗ್ಸ್, ಪು. 20,21.

**ಸಭೆಯಾಗಿ ನಮ್ಮ ಸ್ವಂತ ವರ್ತನೆಗಳು ನಮ್ಮ ಸುತ್ತ ಮುತ್ತಲಿನವರ ಮೇಲೆ ಯಾವ ಪ್ರಭಾವ ಬೀರುತ್ತವೆ? ಸವೆಂತ್ ಅಡ್ವೆಂಟಿಸ್ಟರಲ್ಲಿಯ ಯಾವ ಸ್ವಭಾವಗಳು ಅವರ ಮೇಲೆ ಸಕಾರತ್ಮಕ ಪರಿಣಾಮ ಬೀರಿವೆ?**

**ಮಂಗಳವಾರ** **ಅಕ್ಟೋಬರ್ 9**

**ಇಬ್ರಿಯ ರಾಷ್ಟ್ರದ ವಿಭಜನೆ**

ಭ್ರಷ್ಟತೆ ಮತ್ತು ಅದರ ಭಯಂಕರ ಪರಿಣಾಮಗಳು ಒಂದು ದಿನದಲ್ಲೇ ಬರಲಿಲ್ಲ, ಶತ ಶತಮಾನದುದ್ದಕ್ಕೂ ದೇವ ಜನರು ಆರಿಸಿಕೊಂಡ ತಪ್ಪು ಜೀವನ ದಾರಿಯಿಂದ ಮತ್ತು ಮಾಡಿದ ಆಯ್ಕೆಗಳಿಂದ ಅವರು ಪಾಪದ ಕೊಡ ತುಂಬಿ ಅವರ ವಿನಾಶಕಾರಿ ಪ್ರತಿಫಲ ಅನುಭವಿಸಬೇಕಾಯಿತು.

ರೆಹಬ್ಬಾಮ ಅರಸನ ಕಥೆಯನ್ನು 1 ಅರಸುಗಳು 12:1–16ರಲ್ಲಿ ಓದಿರಿ: ದೇವ ಜನರಲ್ಲಿ ಭಯಂಕರ ಭೇದವನ್ನು ಉಂಟು ಮಾಡಿದ್ದು ಯಾವುದು?

ಇಸ್ರಾಯೇಲ್ಯರಿಗಾಗಿ ದೇವರ ಚಿತ್ತ ಏನಾಗಿತ್ತೆಂದು ರೆಹಬ್ಬಾಮನಿಗೂ ಆತನ ಅನುಭವಿಗಳಲ್ಲದ ಕಿರಿವಯಸ್ಸಿನ ಸಲಹೆಗಾರರಿಗೂ ಅರ್ಥವಾಗಿದ್ದರೆ, ಆಡಳಿತದಲ್ಲಿ ಆಗ ಬೇಕಾಗಿದ್ದ ಸುಧಾರಣೆಯು, ಜನರ ಮನವಿಗೆ ಓಗೊಡುತ್ತಿದ್ದರು. ಶೆಕೆಮನಲ್ಲಿ ಅವರೆಲ್ಲರಿಗೂ ಒಂದು ಅವಕಾಶವಿತ್ತು, ಅವರು ತಾವು ಕೈಗೊಳ್ಳುವ ಕ್ರಮದ ಫಲಿತಾಂಶ ಎಂಥದು ಎಂದು ತರ್ಕ ಮಾಡುವುದರಲ್ಲಿ ವಿಫಲರಾಗಿ ಅಧಿಕ ಜನರ ಮೇಲೆ ಪ್ರಭಾವಬೀರುವ ಅವಕಾಶ ಕಳೆದುಕೊಂಡರು. ಸೊಲೊಮೋನನು ಅವರ ಮೇಲೆ ಹೇರಿದ ಭಾರವಾದ ನೊಗ–ಬಿಟ್ಟಿ ಕೆಲಸವನ್ನು ಮುಂದೆವರಿಸುತ್ತೇವೆಂದು ಅವರು ಹೇಳಿದ್ದು, ಇಸ್ರಾಯೇಲ್ಯರ ಸುಖಕ್ಕಾಗಿ ದೇವರು ಮಾಡಿದ ವ್ಯವಸ್ಥೆಗೆ ವಿರುದ್ಧವಾಗಿದ್ದು, ಅವರ ಉದ್ದೇಶಗಳ ಪ್ರಾಮಾಣಿಕತೆಯನ್ನು ಜನರು ನಂಬದವರಾದರು. ಇಂಥ ಬುದ್ಧಿಹೀನ ಮತ್ತು ಜನರ ಮನ ಅರಿಯದೆ ತಮ್ಮ ಅಧಿಕಾರ ಚಲಾಯಿಸಲು ಮುಂದೆ ವರೆದ ಅರಸನು ಮತ್ತು ಆತನ ಆಯ್ದ ಸಲಹೆಗಾರರು ಅವರ ಅಧಿಕಾರ ಮತ್ತು ಸ್ಥಾನದ ಗರ್ವ ಮೆರೆದರು. ಎಲ್ಲೆನ್.ವೈಟ್ ಪ್ರಾಫೆಟ್ಸ್ ಎಂಡ್ ಕಿಂಗ್ಸ್ ಪು. 90.

**ಸರಿಯಾದ ನಿರ್ಧಾರ ಮಾಡುವದಕ್ಕೆ ಜ್ಞಾನ ಬೇಕೆಂಬ ಬಗ್ಗೆ ಕೆಳಗಿನ ವಾಕ್ಯಗಳು ಹೇಳುವದೇನು? ನಿಜವಾದ ಜ್ಞಾನದ ಉಗಮ ಎಲ್ಲಿದೆ?**

ಜ್ಞಾನೋಕ್ತಿಗಳು 4:1–9 ________________________________

ಜ್ಞಾನೋಕ್ತಿಗಳು 9:10 ________________________________

ಯಾಕೋಬನು 1:5 ________________________________

ರೆಹಬ್ಬಾಮನು ಮತ್ತು ಆತನಮಂದಿ ತನ್ನ ಜನರ ಮೇಲೆ ಇನ್ನೂ ಹೆಚ್ಚಿನ ಬಿಟ್ಟಿ ಕೆಲಸದ ಭಾರ ಹೊರಿಸುತ್ತೇನೆ ಎಂದ ದುಡುಕಿನ ನಿರ್ಧಾರದ ಕತೆ ಅವನಿಗೆ ಮಾತ್ರವಲ್ಲ ಇಡೀ ಇಸ್ರಾಯೇಲ್ಯ ರಾಜ್ಯಕ್ಕೆ ಒಂದು ದುಃಖದ ಕಥೆ. ರಾಜನು ಎರಡು ಗುಂಪಿನ ಸಲಹೆಗಾರರಿಂದ ಸಲಹೆ ಕೇಳಿದನು, ಆದರೆ ಆತನು ತೆಗೆದುಕೊಂಡ

ನಿರ್ಧಾರ ತನ್ನ ಸಮಕಾಲಿನವರೂ, ಅನುಭವಿಗಳಲ್ಲಿದವರೂ ಸೂಚಿಸಿದ್ದು; ಇದು ತಂದೆ ಸೊಲೊಮೋನ, ತಾತ ದಾವೀದ ಎಂಬತ್ತು ವರ್ಷಗಳಿಂದ ಕಟ್ಟಿದ ರಾಜ್ಯ ವಿನಾಶನ ಆಯಿತು. ತಾನು ತನ್ನ ತಂದೆಗಿಂತಲೂ ಕಠಿಣನು ಎಂದು ರಾಜನು ಜನರನ್ನು ಬೆದರಿಸಬೇಕು, ಎಂದು ಸೂಚಿಸಿದ ಆಲೋಚನೆ ಬುದ್ಧಿಹೀನ ಆಲೋಚನೆಯಾಗಿತ್ತು. ಯೌವನಸ್ಥರ ಪ್ರಕಾರ ಜನರು ಕೆಲಸದ ಭಾರ ಕಡಿಮೆ ಮಾಡೆಂದು ಕೇಳಿಕೊಂಡ ಬೇಡಿಕೆಗೆ ಓಗೂಟ್ಟರೆ ಅದು ರಾಜನಿಗೆ ಸರಿಬಾರದ ನಾಯಕತ್ವದ ಶೈಲಿಯಾಗಿತ್ತು. ಬದಲಾಗಿ ರಾಜನು ಕರುಣೆತೋರದೆ, ಕ್ರೂರಿಯಾಗಿ ತೋರಬೇಕು ಅಂದರು. ಅಂತ್ಯದಲ್ಲಿ ಅವನು ಬೆದರಿಸುವವನೂ ಜನರ ವಿಶ್ವಾಸಕ್ಕೆ ಮತ್ತು ನಿಷ್ಠೆಗೆ ಅರ್ಹನಲ್ಲದವನಾಗಿಯೇಉಳಿದನು. ಹೀಗಾಗಿ ಜನರಲ್ಲಿ ಎರಡು ಗುಂಪುಗಳಾದವು, ಹೀಗಾಗಬಾರದಾಗಿತ್ತು, ಮತ್ತು ತನ್ನ ಜನರಿಗಾಗಿ ದೇವರು ಇಂಥ ಯೋಜನೆ ಮಾಡಿಯೇ ಇರಲಿಲ್ಲ.

**ಬುಧವಾರ** **ಅಕ್ಟೋಬರ್ 10**

**ಕೊರಿಂಥದಲ್ಲಿ ಮತ ಭೇದ.**

ದುರ್ದೆಶೆಯಂದರೆ, ಹೊಸಡಂಬಡಿಕೆಯ ಕಾಲದಲ್ಲಿಯೂ ದೇವಜನರಲ್ಲಿಯ ಒಡಕಿಗೆ(ಭೇದಭಾವಕ್ಕೆ) ಅಂತ್ಯ ಬರಲಿಲ್ಲ, ಉದಾಹರಣೆಗೆ, ಪೌಲನು ಕೊರಿಂಥ-ದವರಿಗೆ ಬರೆದ ಮೊದಲ ಪತ್ರಿಕೆಯ ಪ್ರಥಮ ನಾಲ್ಕು ಅಧ್ಯಾಯಗಳಲ್ಲಿ ಆತನು ಐಕ್ಯತೆಗಾಗಿಯೇ ಮನವಿ ಮಾಡಿದ್ದಾನೆ. ಪೌಲನು ಎಫೆಸದಲ್ಲಿರುವಾಗ ಕೊರಿಂಥದ ಸಭೆಯಲ್ಲಿ ಅನೇಕ ಪಂಗಡಗಳು ಉಂಟಾಗಿವೆ ಎಂದು ಕೇಳಿಸಿಕೊಂಡನು. ಆದ್ದ-ರಿಂದ ತನ್ನ ಪತ್ರಿಕೆಯ ಮುನ್ನುಡಿ ಉದ್ದಮಾಡಿ ಸಭೆಯಲ್ಲಿಯ ಒಗ್ಗಟ್ಟಿನ ಪ್ರಾಮುಖ್ಯತೆ ತಿಳಿಸುತ್ತ ಮತಬೇಧವನ್ನು ದೂರವಿಡಬೇಕೆಂದು ತಿಳಿಸಿದ್ದಾನೆ. ಈ ಬೆಳವಣಿಗೆ ಅವನಲ್ಲಿ ಕಾಳಜಿ ಮೂಡಿಸಿದೆ, ಕೇಡನ್ನು ತಡೆಗಟ್ಟಲು ದೈವ ಪ್ರೇರಿತ ಸಂದೇಶವನ್ನು ಅವರಿಗೆ ಬರೆದಿದ್ದಾನೆ.

**1ಕೊರಿಂಥ 1:10–17ರ ಪ್ರಕಾರ ಅವರಲ್ಲಿಯ ಅನೈಕ್ಯತೆ ಭೇದಭಾವ ಮತ್ತು ಕಲಹಗಳಿಗೆ ಕಾರಣಗಳು ಯಾವುವು.?**

——————————————————————————————

——————————————————————————————

——————————————————————————————

ಕೊರಿಂಥದವರೊಳಗಿನ ಭೇದ, ಜಗಳಗಳ ಬಗ್ಗೆ ಖ್ಲೋಯೆಗೆಯ ಮನೆಯವರೊಬ್ಬರು ಪೌಲನಿಗೆ ತಿಳಿಸಿದಾಗ, ಅಲ್ಲಿರುವ ಸಹೋದರ ಸಹೋದರಿಯರ ಬಗ್ಗೆ ಪೌಲನು ಕಳವಳಗೊಂಡನು. ಪ್ರಾರಂಭದ ಆತನ ಮಾತುಗಳು ಅವರಿಗಾಗಿ ಅವನ್ನಲ್ಲಿರುವ ಆಳವಾದ ಕಾಳಜಿ ತೋರಿಸುತ್ತವೆ: "ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ". (1 ಕೊರಿಂಥ 1:10). ಭೇದ ಹುಟ್ಟಿಸುವ ಯಾವುದೇ ಕಾರಣವಿದ್ದರೂ ಹಾಗಾಗಬಾರದು ಎಂದು ಪೌಲನು ಒತ್ತಿ ಹೇಳಿದನು. ಪೌಲನು ಕೊರಿಂಥದವರ ಗಮನ ಸೆಳೆದು, ಕ್ರೈಸ್ತರು ಕ್ರಿಸ್ತನನ್ನು ಹಿಂಬಾಲಿಸಬೇಕೇ ವಿನಃ ಮಾನವರನ್ನಲ್ಲ– ಆ ವ್ಯಕ್ತಿ ಎಷ್ಟೇ ದೊಡ್ಡವರ ಪಡೆದವ, ಅಥವಾ ಕರೆಯಲ್ಪಟ್ಟವನಾಗಿದ್ದರೂ, ಕೊರಿಂಥದವರು ತಮ್ಮ ತಮ್ಮೊಳಗೆ ಗುಂಪುಗಾರಿಕೆಯಲ್ಲಿ ತೊಡೆಗಿದ್ದರೆಂಬುದನ್ನು ಪೌಲನು ತಿಳಿದು ಸ್ಪಷ್ಟ ಭಾಷೆಯಲ್ಲಿ ಅಂಥ ಗುಂಪುಗಾರಿಕೆಗಳು ಕ್ರಿಸ್ತನನ್ನು ಮೆಚ್ಚಿಸುವುದಿಲ್ಲ ಎಂದನು. ಆತನು ಹೇಳಿದ್ದು ಕ್ರೈಸ್ತ ಒಗಟ್ಟು ಕ್ರಿಸ್ತನ ಮತ್ತು ಶಿಲುಬೆಯ ಮೇಲಿನ ಆತನ ಬಲಿದಾನದ ಮೇಲೆ ಅವಲಂಬಿಸಿ(ಅ ಕೊರಿಂಥ 1:13). ಕ್ರೈಸ್ತ ಐಕ್ಯತೆಯ ಮೂಲ, ಸತ್ಯವಾದ ಯೇಸು ಕ್ರಿಸ್ತನ ಮತ್ತು ಆತನು ಶಿಲುಬೆಯ ಮೇಲೆ ಮಾಡಿದ ಬಲಿದಾನ ಯಾವ ವ್ಯಕ್ತಿ, ಅವನೆಷ್ಟೇ 'ಸಮರ್ಥ'ನಿರಬಹುದು, ಪ್ರಸಂಗಿಯಾಗಿರಬಹುದು, ಮುಖಂಡವಾಗಿರಬಹುದು, ಅದರ ದೆಸೆಯಿಂದ ಈ ಐಕ್ಯತೆ ಬರುವುದಿಲ್ಲ. ಶಿಲುಬೆಯ ಪಾದದಡಿಯಲ್ಲಿ ನಾವೆಲ್ಲರೂ ಸರಿಸಮಾನರು. ನಮ್ಮೆಲ್ಲರಿಗೆ ದೀಕ್ಷಾಸ್ನಾನವಾದದ್ದು ಯೇಸು ಎಂಬ ಹೆಸ–ರಿನಲ್ಲೇ; ಅವನೇ ನಮ್ಮನ್ನು ಪಾಪದಿಂದ ಶುದ್ಧೀಕರಿಸ ಶಕ್ತನು. ಹೀಗಿದ್ದರೂ ನಾವೆಲ್ಲರು ಕ್ರೈಸ್ತನಲ್ಲಿಯೇ ಒಗ್ಗಟ್ಟಿಗಾಗಿ ಕ್ರೀಯಾಸಾಧಕರಾಗಬೇಕು. ಸವೆಂತ್–ಡೇ–ಅಡ್ವೆಂಟಿಸ್ಟ್‌ರಾದ ನಮಗೆ ನಮ್ಮ ವಿಶ್ವಾಸ ಮತ್ತು ಕರ್ತವ್ಯಗಳು ಒಗ್ಗಟ್ಟನ್ನುಂಟು ಮಾಡಿವೆ ಎಂದು ಸುಮ್ಮನಿರಬಾರದು. ನಮ್ಮಲ್ಲಿಯ ಭೇದ, ಜಗಳಗಳು ಐಕ್ಯತೆಯನ್ನು ಒಡೆಯಬಹುದು ಆದ್ದರಿಂದ ಕ್ರಿಸ್ತನಲ್ಲಿಯ ಪ್ರೀತಿ ಮತ್ತು ಕ್ರಿಸ್ತನ ಪ್ರಭುತ್ವವನ್ನು ನಾವು ಸದಾ ಒಪ್ಪಿಕೊಂಡು ಅನ್ಯೋನ್ಯತೆಯನ್ನು ಪೋಷಿಸಬೇಕು. ಆತನಲ್ಲಿ ಒಂದಾಗಿರಬೇಕು.

**ಪೌಲನು ಇಲ್ಲಿ ಎದುರಿಸಿರುವ ಅಪಾಯಗಳಿಂದ ಹೇಗೆ ತಪ್ಪಿಸಿಕೊಳ್ಳಬಹುದು? ಕ್ರಿಸ್ತನನ್ನು ಬಿಟ್ಟು ಬೇರೆ ಯಾರಿಗೂ ಹೆಚ್ಚಾದ ನಿಷ್ಠೆ ತೋರಿಸಬಾರದು ಯಾಕೆ?**

**"ತೋಳಗಳು ಬರುವವು"**

ಅಪೋಸ್ತಲರ ಕೃತ್ಯ 20:25–31 ಓದಿರಿ: ಎಫೆಸದ ಹಿರಿಯರಿಗೆ ಪೌಲನು ಯಾವ ಎಚ್ಚರಿಕೆ ಕೊಟ್ಟನು? ಇದು ಆಗಬಾರದೆಂದು ಅದನ್ನು ತಡೆಗಟ್ಟಲು ಅವರು ಏನು ಮಾಡಬೇಕಾಗಿತ್ತು?

ಪೌಲನು ತನ್ನ ಸೇವಾ ಅವಧಿಯಲ್ಲಿ ಆಗಾಗ ವಿರೋಧ ಎದುರಿಸಿದನು, ಯೇಸುವಿನ ಸುವಾರ್ತೆಯ ಶುದ್ಧತೆಯನ್ನು ಉಳಿಸಿಕೊಳ್ಳುವುದು ಕಠಿಣವೆಂಬುದು ಅವನಿಗೆ ತಿಳಿದಿತ್ತು. ಎಫೆಸದ ಹಿರಿಯರಿಗೆ ಬೀಳ್ಕೊಡುಗೆಯ ಸಂದೇಶವಾಗಿ ಯಹಜ್ಕೇಲನು 33:1–6ರಲ್ಲಿ ತಿಳಿಸಲ್ಪಟ್ಟಿರುವ ಕಾವಲುಗಾರನ ದೃಷ್ಟಾಂತವನ್ನು ಉಪಯೋಗಿಸಿಕೊಂಡು ತನ್ನ ಜೊತೆನಾಯಕರೂ ಕೂಡ ಸುವಾರ್ತೆಯ ಶುದ್ಧತೆಯನ್ನು ಉಳಿಸಿಕೊಂಡು ಹೋಗಲು ಜವಾಬ್ಧಾರರಾಗಿದ್ದಾರೆ ಎಂದು ತಿಳಿಸಿ ಹೇಳಿದನು. ಅವರು ತಮ್ಮ ಹಿಂಡುಗಳಿಗೆ ನಂಬಿಗಸ್ಥ ಕುರುಬರಾಗಿರಬೇಕಾಗಿತ್ತು. ಪೌಲನು ಸುಳ್ಳು ಬೋಧಕರನ್ನು(ಅ.ಕೃ 20:29) "ಕ್ರೂರವಾದ ತೋಳಗಳು" ಎಂದು ಉಪಯೋಗಿಸಿದ್ದು (ಮತ್ತಾಯ 7:15)ರಲ್ಲಿ ಯೇಸು ಸುಳ್ಳುಬೋಧಕರು ಕುರಿವೇಷಧಾರಿಗಳಾಗುತ್ತಾರೆ ಎಂದು ಎಚ್ಚರಿಸಿದ್ದನ್ನು ನೆನೆಪಿಗೆ ತರುತ್ತದೆ. ಪೌಲನು ಈ ಸಂದೇಶವನ್ನು ತಾನು ಸ್ಥಾಪಿಸಿದ ಏಷ್ಯಾ ಖಂಡದ ಸಭೆಗಳಲ್ಲಿ ಬೋಧಿಸಿದ ಕೆಲವೇ ದಿನಗಳ ಅಂತರದಲ್ಲೇ ಆ ಸಭೆಗಳಿಗೆ ಬಂದು ಈ ಸುಳ್ಳುಬೋಧಕರು ವಿಶ್ವಾಸಿಗಳನ್ನು ಕದ್ದು ಕೊಳ್ಳಲು ಪ್ರಯತ್ನಿಸಿದರು. ಎಫೆಸದವರಿಗೆ 5:6–14 ಮತ್ತು ಕೊಲೊಸ್ಸೆಯವರಿಗೆ 2:8ರಲ್ಲಿ ಏಷ್ಯಾ ಖಂಡದ ಸಭೆಗಳಿಗೆ ಪೌಲನು ಕೊಟ್ಟ ಎಚ್ಚರಿಕೆಗಳನ್ನು ನಾವು ಓದಬಹುದು.

ತಿಮೊಥೆಯನಿಗೆ ಬರೆದ ಎರಡನೆ ಪತ್ರಿಕೆಯಲ್ಲಿ ಪೌಲನು ತಿಮೊಥ–ಿಯನನ್ನು ಎಚ್ಚರಿಸಿ ಎಫೆಸ ಸಭೆಗೆ ಅವನು ಜವಾಬ್ಧಾರನಾದ್ದರಿಂದ ಸಭೆಯಲ್ಲಿ ದೋಷಗಳುಂಟಾಗಬಾರದು ಮತ್ತು ಕೊನೆಯ ಕಾಲದಲ್ಲಿಯ ಭಕ್ತಿಹೀನತೆಯ ಬಗ್ಗೆ ಮನವರಿಕೆ ಮಾಡಿದನು.

**2 ತಿಮೊಥೆಯನಿಗೆ 2:14–19 ಮತ್ತು 3:12–17 ಓದಿರಿ: ಸುಳ್ಳು ಬೋಧಕರನ್ನು ಎದುರಿಸುವ ಮತ್ತು ಸಭೆಯ ಐಕ್ಯತೆಯನ್ನು ಕಾಪಾಡಿಕೊಳ್ಳುವದರ ಬಗ್ಗೆ ಪೌಲನು ತಿಮೊಥೆಯನಿಗೆ ಬರೆದದ್ದು ಏನು?**

ಮೊದಲನೆಯದಾಗಿ, ತಿಮೋಥೆಯನು ಸತ್ಯವೇದವನ್ನು ಅರಿತವನಾಗಿರಬೇಕು, "ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು"(2ತಿಮೋಥಿ 2:15)

ಪ್ರಯೋಜನವಿಲ್ಲದ ಎಲ್ಲ ವಾಗ್ವಾದಗಳಿಗೆ ಒಳ್ಳೆಯ ಉಪಮನ ದೇವರು ಕೊಟ್ಟಂಥ ವಾಕ್ಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಮತ್ತು ಬೋಧಿಸುವುದು. ಸತ್ಯವೇದದಲ್ಲಿಯ ಸತ್ಯವನ್ನು ಸರಿಯಾಗಿ ಅರ್ಥೈಸುವುದು ಅಗತ್ಯವಾಗಿದೆ, ಇದು ಸತ್ಯವೇದದ ದೊಡ್ಡ ಚಿತ್ರಕ್ಕೆ ಯಾವ ವಿಧದಲ್ಲಿಯೂ ವಿರೋಧತೆಯನ್ನು, ತಪ್ಪಾಥ-ರ್ಥವನ್ನು ತರಬಾರದು ಮತ್ತು ಯಾರಲ್ಲಿಯೂ ಈ ಮೂಲಕ ಕ್ರಿಸ್ತನಲ್ಲಿಯ ನಂಬಿಕೆಗೆ ಧಕ್ಕೆಯಾಗಬಾರದು. ಅನ್ವಯವಾಗದವುಗಳು ಮತ್ತು ಇತರ ವಿಷಯಗಳು ಸತ್ಯವೇದ ತತ್ವಗಳಿಗೆ ಒಳಗಾಗಬೇಕು, ಹೀಗಿದರೆ ಒಬ್ಬ ವಿಶ್ವಾಸಿ ಕ್ರಿಸ್ತನಲ್ಲಿ ಜಯಪ್ರದ ಬದುಕು ನಡೆಸಲು ಸಾದ್ಯವಾಗುತ್ತದೆ. ಎರಡನೆಯದು ಪೌಲನು ತಿಮೊಥೆಯನಿಗೆ ಹೇಳುವುದು, "ಪ್ರಾಪಂಚಿಕವಾದ ಆ ಹರಟೆ ಮಾತುಗಳಿಗೆ ದೂರವಾಗಿರು" (2ತಿಮೊಥೆ 2:16). ತಿಮೊಥೆಯನು ಒಬ್ಬ ಸಮರ್ಥ ಬೋಧಕನೆಂದು ಕರೆಯಿಸಿಕೊಳ್ಳಬೇಕೆಂದರೆ ಅವನು ಪ್ರಯೋಜನಕ್ಕೆ ಬಾರದ ಕಲ್ಪನಾ ವಿಷಯಗಳನ್ನು ಬೋಧನೆಯಲ್ಲಿ ಸೇರಿಸಿಕೊಳ್ಳಕೂಡದು. ಅವುಗಳಿಗೆ ಮನಸ್ಸು ಕೊಡುವವರು ಹೆಚ್ಚೆಚ್ಚಾಗಿ ಭಕ್ತಿಹೀನರಾಗುವರು ಮತ್ತು ವಿಶ್ವಾಸಿಗಳ ನಂಬಿಕೆಯನ್ನು ವೃದ್ಧಿಪಡಿಸುವುದಿಲ್ಲ. ಸತ್ಯ ದೈವಿಕತೆಗೆ ಮತ್ತು ವಿಶ್ವಾಸಿಗಳ ಅನ್ಯೋನ್ಯತೆಗೆ ನಡೆಸಲು ಶಕ್ತವಾಗಿದೆ. ಯಾಕೆ ಪ್ರಾಪಂಚಿಕವಾದವಗಳನ್ನು ಜನರು ಮತ್ತು ತಿಮೊಥಿಯನು ದೂರವಿಡಬೇಕೆಂದರೆ ಇಂಥ ದೋಷಿಗಳು ಕೊಳಕು ಹುಣ್ಣಿನಂತೆ ಸಭೆಗಳಲ್ಲಿ ಹರಡಿಕೊಳ್ಳುವ ಕಾರಣದಿಂದ (2ತಿಮೋಥಿ 2:17). ಕೊನೆಯ ಕಾಲದಲ್ಲಿ ಸಭೆಯ ಐಕ್ಯತೆಗೆ ಧಕ್ಕೆ ತರುವ ಸುಳ್ಳು ಬೋಧನೆಗಳಿಗೆ ಕಟ್ಟು ಮದ್ದು ದೇವರ ವಾಕ್ಯಗಳಿಗೆ ವಿಧೆಯರಾಗಿ ನಡೆಯುವದೇ (2ತಿಮೋ 3:14–17).

**ಸಭೆಯಾಗಿ ನಾವು ಹೇಗೆ ಇಂಥ ಸುಳ್ಳು ಬೋಧನೆಗಳಿಂದ ಬೋಧಕರಿಂದ ನಮ್ಮನ್ನು ವಿಭಜನೆಯಾಗದ ಹಾಗೆ ಕಾಪಾಡಿಕೊಳ್ಳುವುದು?**

**ಶುಕ್ರವಾರ** **ಅಕ್ಟೋಬರ್ 12**

**ಹೆಚ್ಚಿನ ಅಭ್ಯಾಸ: ಎಲ್ಲೆನ್. ವೈಟ್ "ದಿ ರೆಂಡಿಂಗ್ ಆಫ ದಿ ಕಿಂಗಡಮ್" ಪು. 87–98, ಪ್ರಾಫೆಟ್ಸ್ ಎಂಡ್ ಕಿಂಗ್ಸ್; "ಎ ಮೆಸೇಜ್ ಆಫ್ ವಾರ್ನಿಂಗ್ ಎಂಡ್ ಎಂಟ್ರೀಟ್" ಪು. 298–308, ಆಕ್ಟ್ಸ್ ಆಫ ದಿ ಅಪೋಸ್ಟಲ್ಸ್.**

" ತನ್ನ ಆಯ್ದ ಸೇವಕರು ಐಕ್ಯತೆಯಿಂದ ಕೂಡಿರಲು ಸಾಮ್ಯರಸ್ಯವಾಗಿರಲು ಕಲಿಯಬೇಕೆಂದು ದೇವರು ಬಯಸುತ್ತಾರೆ. ಹಲವು ಕೆಲಸಗಾರರು ತಮಗೆ ಕೊಡಲ್ಪಟ್ಟಿರುವ ದೇವರ ತಲಾಂತುಗಳನ್ನು ಇತರರ ತಲಾಂತುಗಳಿಗೆ ಹೋಲಿಸಿದಾಗ

ಇರುವ ಅಂತರದಿಂದಾಗಿ ಹೊಂದಾಣಿಕೆಯಿಂದ ಇರುವುದು– ಸಾದ್ಯವಾಗದು ಎಂದೆನಿಸುತ್ತಾರೆ; ಆದರೆ ಅವರ ಸೇವೆ ತಲುಪಬೇಕಾದದ್ದು ಕೂಡ ವೈವಿಧ್ಯಮಯ ಮನೋಭಾವದವರಿಗೆ, ಕೆಲವರು ಒಬ್ಬ ಬೋಧಕರು ಕಲಿಸುವ ವಿಧಾನದಿಂದಾಗಿ ಸತ್ಯವನ್ನು ನಿರಾಕರಿಸಬಹುದು, ನಿರಾಕರಿಸಿದವರೇ ಇನ್ನೊಬ್ಬ ಬೋಧಕ ಕಲಿಸುವ ಇನ್ನೊಂದು ವಿಧಾನದಿಂದಾಗಿ ಸತ್ಯವನ್ನು ಸ್ವೀಕರಿಸಬಹುದು, ಆದ್ದರಿಂದ ಅವರು ಒಂದಾಗಿ ಸೇವೆಯನ್ನು ಮಾಡುವದಾದರೆ ಅಲ್ಲಿ ನಿರೀಕಷೆ ಇದೆ. ಅವರು ನಾನಾ ತಲಾಂತುಗಳಿರುವವರಾದರೂ ಒಬ್ಬನೇ ದೇವರ ಆತ್ಮನ ನಿಯಂತ್ರಣದಲ್ಲಿರುವರು. ಅವರ ಪ್ರತಿಯೊಂದು ನುಡಿ ಮತ್ತು ನಡೆಯಲ್ಲಿ ಪ್ರೀತಿ, ನಯ ವಿನಯತೆ ತೋ–ರಿಬರುತ್ತವೆ; ಮತ್ತು ಹೀಗೆಯೇ ಪ್ರತಿಯೊಬ್ಬ ಸೇವಕರು ತಮ್ಮ ತಮ್ಮ ಪಾತ್ರಗಳನ್ನು ಪ್ರಾಮಾಣಿಕತೆಯಿಂದ ನಿರ್ವಹಿಸಿದರೆ, ತನ್ನ ಹಿಂಬಾಲಿಕರ ಐಕ್ಯತೆಗಾಗಿ ಕ್ರಿಸ್ತನು ಮಾಡಿದ ಪ್ರಾರ್ಥನೆಗೆ ಉತ್ತರ ದೊರೆತಂತೆ, ಮತ್ತು ಇವರು ಕ್ರಿಸ್ತನ ಶಿಷ್ಯರು ಎಂದು ಜಗತ್ತಿಗೆ ತಿಳಿಯುವುದು". ಎಲೆನ್ ವೈಟ್, ಗಾಸ್ಪಲ್ ವರ್ಕರ್ಸ್. ಪು. 483

**ಚರ್ಚೆಗಾಗಿ ಪ್ರಶ್ನೆಗಳು:**

1. "ತಮ್ಮ ಕಣ್ಣಿಗೆ" ಸರಿಬೀಳುವುದನ್ನು ಮಾಡುತ್ತಾರೆ ಎಂಬ ವಿಷಯ ಹೊಸದೇನಲ್ಲ. ಆಧುನಿಕತೆಯ ನಂತರದ ಕಾಲದ ಜನತತ್ವವು ತಾತ್ವಿಕ ಅಥವಾ ನೈತಿಕವಾಗಿರುವ ಒಂದೇ ಅಧಿಕಾರವನ್ನು ವಿರೋಧಿಸುತ್ತದೆ. ಇದು, ಸತ್ಯವೇದ ಎಚ್ಚ–ರಿಸುವ ನೈತಿಕ ಅನಾರಾಜ್ಯಕ್ಕೆ ದಾರಿಮಾಡಿ ಕೊಡಲು ಸಾದ್ಯ. ಕ್ರೈಸ್ತರೆನಿಸಿಕೊಳ್ಳುವ ನಾವು ಮತ್ತು ಇಡೀ ಸಭೆಯಾಗಿ ಇಂಥ ಸವಾಲನ್ನು ಎದುರಿಸುವುದು ಹೇಗೆ?

2. ರೆಹಬ್ಬಾಮ ರಾಜನ ಕಥೆ ಮತ್ತು ಇಸ್ರಾಯೇಲ ರಾಜ್ಯದ ವಿಭಜನಯ ಬಗ್ಗೆ ಚಿಂತನೆ ಮಾಡಿರಿ(1ಅರಸುಗಳು 12) ಇದರಿಂದ ಇಂದು, ನಾವು ಕಲಿಯಬೇಕಾದ ಪಾಠಗಳು ಯಾವುವು?

3. ಸ್ಥಳಿಯ ಸಭೆಗಳಲ್ಲಿ ಗುಂಪುಗಾರಿಕೆ ಮತ್ತು ಜಗಳಗಳನ್ನು ತಡೆಗಟ್ಟಲು ಸಭಾಮುಖಂಡರು ಮತ್ತು ಸದಸ್ಯರು ಏನು ಮಾಡಬೇಕು? ಅವು ಬೆಳೆದು ದೊಡ್ಡದಾಗಿ ಎಲೆಲರನ್ನು ಕಾಪಾಡುವ ಮೊದಲು ಅವು ಇತ್ಯಾರ್ಥಗೊಳ್ಳುವುದು ಎಷ್ಟು ಪ್ರಾಮುಖ್ಯವಾಗಿದೆ? ಕೊರಿಂಥದಲ್ಲಿ ಕೆಲವರು ಇಂಥ ಬಲೆಗೆ ಬಿದ್ದಂತೆ ಸಭೀಕರಾಘಿ ನಾವು ಬೀಳದಂತೆ ಎಚ್ಚರವಹಿಸುವುದು ಹೇಗೆ?

4. ಜ್ಞಾನೊಕ್ತಿ 6:16–19ರಲ್ಲಿ ವೈಮನಸ್ಸು ಮೂಡಿಸುವವುಗಳ ಪ್ರಸ್ತಾಪದ ಅಭ್ಯಾಸ ಮಾಡಿರಿ. ನಿಮ್ಮ ಸಭೆಯಲ್ಲಿ ಉಂಟಾಗುವ ವೈಮನಸ್ಸಿನ ಘಟನೆಗಳನ್ನು ತಡೆಗಟ್ಟಲು ಇದರಿಂದ ನೀವು ಕಲಿಯುವುದೇನು?

**ಸಾರಾಂಶ**: ಸತ್ಯವೇದದಲ್ಲಿ ಅನೈಕತೆಗೆ ಕಾರಣವಾದ ಘಟನೆಗಳನ್ನು ಕಾಣುತ್ತೇವೆ. ದೇವಜನರು ಪ್ರಾಮಾಣಿಕವಾಗಿ ದೇವರಿಗೆ ವಿಧೇಯರಾಗಿದ್ದಾಗ ಅನೈಕ್ಯತೆ ತರುವ ಅಪಾಯಗಳು ಬಹಳ ವಿರಳವಾಗಿದ್ದವು. ನ್ಯಾಯ ಸ್ಥಾಪಕರುಗಳು ಮತ್ತು ರೆಹಾಬ್ಬಾವು ರಾಜನ ಕಾಲದಲ್ಲಿ ಅವರು ತೆಗೆದುಕೊಂಡ ಕೆಲವು ಕೆಟ್ಟ ನಿರ್ಧಾರಗಳಿಂದಾಗಿ ರಾಜ್ಯದಲ್ಲಿ ಒಡಕು ಮೂಡಿದವು, ಹೊಸ ಒಡಂಬಡಿಕೆಯ ಕಾಲದಲ್ಲಿಯೂ ಈ ಅನೈಕತೆಯ ಕುರುಹುಗಳಿದ್ದವು. ದೇವರ ವಾಕ್ಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಮತ್ತು ಅವುಗಳಿಗೆ ವಿಧೇಯರಾಗಿ ನಡೆಯಲು ಸಮರ್ಪಿಸಿಕೊಳ್ಳುವುದು, ನಮ್ಮಲ್ಲಿ ಉಂಟಾಗುವ ಅನೈಕತೆ, ಒಡಕು ಮತ್ತು ಬೇದಗಳಿಂದ ನಮ್ಮನ್ನು ಕಾಪಾಡಲಿರುವ ಉತ್ತಮ ಸಾಧನೆಗಳು.